# <u>ಕರ್ನಾಟಕ ಲೋಕಾಯುಕ್ತ</u>

**ಸಂ.ಕಂಪ್ಲೇಂಟ್/ಉಪಲೋಕ್/** ಎಂವೈಎಸ್/5117/**2022**
**ಪಿ.ಓ. ಎ.ಆರ್.ಇ–06(ಮಂಡನಾಧಿಕಾರಿಗಳ ಶಾಖೆ).**

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ:16/06/2023.

## <u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸು ವರದಿ</u>

**ವಿಷಯ:** **(1) ಶ್ರೀ. ಟಿ.ಎಸ್. ರವಿ ಬಿನ್ ಶೇಖರಪ್ಪ ಟಿ.,** ಉಪನೋಂದಣಾಧಿಕಾರಿ, ಉಪನೋಂದಣಾಧಿಕಾರಿಗಳ ಕಛೇರಿ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ ಮತ್ತು (2) **ಶ್ರೀ. ಡಿ. ನಾಗೇಶ್ ಬಿನ್ ದೊಡ್ಡಯ್ಯ,** ಕಂಪ್ಯೂಟರ್ ಆಪರೇಟರ್ (ಹೊರಗುತ್ತಿಗೆ), ದೊಡ್ಡರಾಯಪೇಟೆ ಗ್ರಾಮ, ಚಾಮರಾಜನಗರ ತಾಲ್ಲೂಕು, ಚಾಮರಾಜನಗರ ಜಿಲ್ಲೆರವರುಗಳು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು ಕರ್ತವ್ಯಲೋಪ / ದುರ್ನಡತೆ / ತೋರಿದ ಬಗ್ಗೆ.

*****

ಚಾಮರಾಜನಗರ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಆರಕ್ಷಕ ಉಪಾಧೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **(1) ಶ್ರೀ. ಟಿ.ಎಸ್. ರವಿ ಬಿನ್ ಶೇಖರಪ್ಪ ಟಿ.,** ಉಪನೋಂದಣಾಧಿಕಾರಿ, ಉಪನೋಂದಣಾಧಿಕಾರಿಗಳ ಕಛೇರಿ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ ಮತ್ತು (2) **ಶ್ರೀ. ಡಿ. ನಾಗೇಶ್ ಬಿನ್ ದೊಡ್ಡಯ್ಯ,** ಕಂಪ್ಯೂಟರ್ ಆಪರೇಟರ್ (ಹೊರಗುತ್ತಿಗೆ), ದೊಡ್ಡರಾಯಪೇಟೆ ಗ್ರಾಮ, ಚಾಮರಾಜನಗರ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರುಗಳ ವಿರುದ್ಧ **ಶ್ರೀ.** ಶ್ರೀಕಾಂತ್ ಜಿ.ಎನ್., ಪೊಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಚಾಮರಾಜನಗರರವರು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರಿಗೆ ಬಂದ ಮಾಹಿತಿ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ, ಸದರಿ ಮಾಹಿತಿಯನ್ನು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಾಮರಾಜನಗರ ರವರಿಗೆ ಸಲ್ಲಿಸಿರುತ್ತಾರೆ. ಸದರಿ ದೂರಿನ ಅನ್ವಯ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಾಮರಾಜನಗರ ರವರು ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ಎದುರುದಾರರುಗಳು ಸಾರ್ವಜನಿಕರಿಂದ ನೋಂದಣಿ ಕೆಲಸವಾದ ಸರ್ಕಾರಿ ಕೆಲಸವನ್ನು ನಿರ್ವಹಿಸಲು ನಿರಾಪೇಕ್ಷಣಾ ಪತ್ರ ನೀಡಲು

ಅಕ್ರಮ ಸಂಭಾವನೆಯನ್ನು ಸಂಗ್ರಹಿಸುವ ಮೂಲಕ ದುರ್ನಡತೆ ತೋರಿದ್ದು, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮ 1966 (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021) ರ ನಿಯಮಗಳನ್ನು ಪಾಲಿಸದೆ ದುರ್ನಡತೆ ತೋರಿಸಿರುತ್ತಾರೆ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರ ಅನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ :-**

i) ದೂರುದಾರರಾದ ಶ್ರೀ. ಶ್ರೀಕಾಂತ್ ಜಿ.ಎನ್., ಪೊಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಚಾಮರಾಜನಗರರವರು ಬಾತ್ಮಿದಾರರ ಮಾಹಿತಿ ಮೇರೆಗೆ ಎದುರುದಾರರುಗಳ ಕಛೇರಿಯಲ್ಲಿ ಅಕ್ರಮ ಸಂಭಾವನೆ ಸಂಗ್ರಹಿಸುತ್ತಿರುವ ಬಗ್ಗೆ ಸಾರ್ವಜನಿಕರ ಮೂಲಕ ಮಾಹಿತಿ ಪಡೆಯಲಾಗಿ ಉಪನೋಂದಣಾಧಿಕಾರಿಯವರ ಕಛೇರಿ, ಗುಂಡ್ಲುಪೇಟೆಯಲ್ಲಿ ನಿಯಮಬಾಹಿರ ಚಟುವಟಿಕೆಗಳು ನಡೆಯುತ್ತಿರುವುದು ಖಚಿತವಾದ ಮೇಲೆ ವರದಿಯನ್ನು ಪೊಲೀಸ್ ಉಪಾಧೀಕ್ಷಕರು ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆರವರಿಗೆ ಸಲ್ಲಿಸಿರುತ್ತಾರೆ. ಅವರ ಆದೇಶದ ಮೇರೆಗೆ ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ. 03/2019ರಲ್ಲಿ ಕಲಂ 7(ಎ) ಮತ್ತು 12 ಭ್ರಷ್ಟಾಚಾರ ನಿಗ್ರಹ ಕಾಯ್ದೆ, 1988ರಡಿಯಲ್ಲಿ ಎದುರುದಾರರುಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

ii) ದಿನಾಂಕ: 27/05/2019 ರಂದು ತನಿಖಾಧಿಕಾರಿಯವರು ಮಾನ್ಯ ನ್ಯಾಯಾಲಯದಿಂದ ಎದುರುದಾರರುಗಳ ಕಛೇರಿಯನ್ನು ಮತ್ತು ಎದುರುದಾರರುಗಳನ್ನು ಶೋಧನೆ ಮಾಡಲು ಶೋಧನಾ ವಾರಂಟನ್ನು ಪಡೆದುಕೊಂಡಿರುತ್ತಾರೆ. ಅದೇ ದಿನ ಪಂಚಸಾಕ್ಷಿದಾರರಾದ 1) ಶ್ರೀ. ಎಸ್. ಮಹಾದೇವಯ್ಯ ಬಿನ್ ಲೇಟ್ ಸಂಜೀವಯ್ಯ, ದ್ವಿ.ದ.ಸ., ಕಾರ್ಯಪಾಲಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ ಮತ್ತು 2) ಶ್ರೀ. ವಿ.ಎಸ್. ಶ್ರೀನಿವಾಸರಾವ್ ಬಿನ್ ಲೇಟ್ ಸುಧಾಕರ ರಾವ್ ವಿ.ಎಸ್., ದ್ವಿ.ದ.ಸ., ಕಾರ್ಯಪಾಲಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ ಇವರುಗಳನ್ನು ಠಾಣೆಗೆ

ಸಂ.ಕಂಪ್ಲೇಂಟ್/ಉಪಲೋಕ್/ ಎಂವೈಎಸ್/5117/2022
ಪಿ.ಓ. ಎ.ಆರ್.ಇ-06

ಕರೆಯಿಸಿ, ದೂರುದಾರರನ್ನು ಮತ್ತು ಸಿಬ್ಬಂದಿಗಳನ್ನು ಪರಿಚಯಿಸಿ, ಠಾಣಾ ಮೊಕದ್ದಮೆ ಸಂ: 03/2019ರಲ್ಲಿ ಪಂಚಸಾಕ್ಷಿದಾರರಾಗಿ ಸಹಕರಿಸಲು ಕೋರಿದಾಗ ಪಂಚರಾಗಿ ಸಹಕರಿಸಲು ಒಪ್ಪಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರು, ಪಂಚರು ಹಾಗೂ ಸಿಬ್ಬಂದಿಗಳೊಂದಿಗೆ ಎದುರುದಾರರುಗಳ ಕಛೇರಿ ಬಳಿ ಸಂಜೆ 5.30 ಗಂಟೆಗೆ ಬಂದಿರುತ್ತಾರೆ. ತನಿಖಾಧಿಕಾರಿಯವರು ಶೋಧನಾ ವಾರಂಟ್ ಜೊತೆ ದೂರುದಾರರು, ಪಂಚರು ಹಾಗೂ ಸಿಬ್ಬಂದಿಗಳೊಂದಿಗೆ ಎದುರುದಾರರುಗಳ ಕಛೇರಿಗೆ ಧಾವಿಸಿ, ಶೋಧನಾ ವಾರಂಟನ್ನು ತೋರಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದಾಗ ಎದುರುದಾರರುಗಳು ಸಹಕರಿಸುವುದಾಗಿ ಒಪ್ಪಿರುತ್ತಾರೆ. ತನಿಖಾಧಿಕಾರಿಯವರು 1ನೇ ಎದುರುದಾರರಿಗೆ ಕಛೇರಿಯಲ್ಲಿನ ಸಿಬ್ಬಂದಿಗಳ ನಗದು ಘೋಷಣಾ ವಹಿಯ ಬಗ್ಗೆ ಕೇಳಿದಾಗ ಅವರು ಹಾಜರುಪಡಿಸಿರುತ್ತಾರೆ. ಸದರಿ ವಹಿಯನ್ನು ಪರಿಶೀಲಿಸಲಾಗಿ ಅದರಲ್ಲಿ 1ನೇ ಎದುರುದಾರರ ಹೆಸರಿನ ಮುಂದೆ 200/- ರೂ., ಪ್ರಶಾಂತ್ ದ್ವಿ.ದ.ಸ.,ರವರ ಮುಂದೆ 50/-ರೂ. ಎಂದು ನಮೂದಿಸಿರುತ್ತದೆ. ಮಹಾದೇವಸ್ವಾಮಿ ದ್ವಿ.ದ.ಸ., ಕೆ. ಶಿವಮೂರ್ತಿರವರ ಹೆಸರುಗಳು ನಮೂದಾಗಿದ್ದು, ಕೆ. ಶಿವಮೂರ್ತಿಯವರು ರಜೆಯಲ್ಲಿರುವುದಾಗಿ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಹಾಜರಾತಿ ಪುಸ್ತಕವನ್ನು ಹಾಜರುಪಡಿಸುವಂತೆ 1ನೇ ಎದುರುದಾರರಿಗೆ ತಿಳಿಸಿದಾಗ ಅವರು ಹಾಜರಾತಿ ಪುಸ್ತಕವನ್ನು ಹಾಜರುಪಡಿಸಿದ್ದು, ಅದರಲ್ಲಿ ನಾಲ್ಕು ಜನ ಅಧಿಕಾರಿ / ಸಿಬ್ಬಂದಿಗಳ ಹೆಸರುಗಳಿದ್ದು, ಅದರಲ್ಲಿ 1ನೇ ಎದುರುದಾರರು ಮತ್ತು ಪ್ರಶಾಂತ್ ದ್ವಿ.ದ.ಸ. ರವರು ಸಹಿ ಮಾಡಿದ್ದು ಕಂಡುಬರುತ್ತದೆ. ಉಳಿದ ಸಿಬ್ಬಂದಿಗಳು ರಜೆಯಲ್ಲಿರುವುದಾಗಿ 1ನೇ ಎದುರುದಾರರು ತಿಳಿಸಿರುತ್ತಾರೆ. ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಮೂರು ಕೊಠಡಿಗಳಿದ್ದು, ಮೊದಲನೇ ಕೊಠಡಿಯು ಸಿಬ್ಬಂದಿಗಳು ಕರ್ತವ್ಯನಿರ್ವಹಿಸುವ, 2ನೇ ಕೊಠಡಿಯಲ್ಲಿ ನೋಂದಣಾಧಿಕಾರಿಗಳು ಮತ್ತು ಕಂಪ್ಯೂಟರ್ ಆಪರೇಟರುಗಳು ಕೂರುವ ಸ್ಥಳ ಮತ್ತು ಜೆರಾಕ್ಸ್ ಮಿಷನ್ ಹಾಗೂ ಕಛೇರಿಗೆ ಸಂಬಂಧಿಸಿದ ಕಡತಗಳು ಇರುತ್ತವೆ. ಮೂರನೇ ಕೊಠಡಿಯು ಅಭಿಲೇಖಾಲಯದ ಕೊಠಡಿಯಾಗಿದ್ದು ಅದರಲ್ಲಿ ಕಛೇರಿಗೆ ಸಂಬಂಧಿಸಿದ ದಾಖಲಾತಿಗಳು, ಅಲ್ಮೇರಾಗಳು, ಕ್ಯಾಷ್‌ಬಾಕ್ಸ್‌ಗಳು ಇರುತ್ತವೆ. ತನಿಖಾಧಿಕಾರಿಯವರು ಸಿಬ್ಬಂದಿಗಳ ಮತ್ತು ಪಂಚರ ಸಮಕ್ಷಮ ಕಛೇರಿಯಲ್ಲಿದ್ದ ಈ ಕೆಳಕಂಡ 1ನೇ ಎದುರುದಾರರನ್ನು ಮತ್ತು ಸಿಬ್ಬಂದಿಗಳನ್ನು ಶೋಧನೆ ಮಾಡಿರುತ್ತಾರೆ:-

| ಕ್ರಮ ಸಂಖ್ಯೆ | ಅಧಿಕಾರಿ ಮತ್ತು ಸಿಬ್ಬಂದಿಯ ಹೆಸರು | ನಗದು ಘೋಷಣಾ ವಹಿಯಲ್ಲಿ ನಮೂದಿಸಿರುವ ಹಣ | ವಶದಲ್ಲಿ ದೊರೆತ ನಗದು ಹಣ |
|---|---|---|---|

L.

| | | | |
|---|---|---|---|
| 1 | ಶ್ರೀ. ಟಿ.ಎಸ್. ರವಿ<br>ಬಿನ್ ಲೇಟ್ ಶೇಖರಪ್ಪ,<br>ಹಿರಿಯ ಉಪನೋಂದಣಾಧಿಕಾರಿ,<br>ಗುಂಡ್ಲುಪೇಟೆ. | 200/- | 160/- |
| 2 | ಶ್ರೀ. ಯು. ಪ್ರಶಾಂತ್<br>ಬಿನ್ ಲೇಟ್ ಜೆ. ಉದಯಶಂಕರ್,<br>ದ್ವಿ.ದ.ಸ.,<br>ಉಪನೋಂದಣಾಧಿಕಾರಿಯವರ ಕಛೇರಿ,<br>ಗುಂಡ್ಲುಪೇಟೆ. | 50/- | 50/- |
| 3 | ಶ್ರೀಮತಿ. ವಾಣಿ<br>ಕೋಂ ಆನಂದ್ ಅಮರ್,<br>ಕಂಪ್ಯೂಟರ್ ಆಪರೇಟರ್,<br>(ಹೆಚ್.ಸಿ.ಎಲ್. ಕಂಪನಿ ವತಿಯಿಂದ ಹೊರಗುತ್ತಿಗೆ). | ನಮೂದಿಸಿಲ್ಲ. | 80/- |
| 4 | ಶ್ರೀ. ಸಹದೇವ್<br>ಬಿನ್ ಲೇಟ್ ಬಸವಯ್ಯ,<br>ಕಂಪ್ಯೂಟರ್ ಆಪರೇಟರ್,<br>(ಹೆಚ್.ಸಿ.ಎಲ್. ಕಂಪನಿ ವತಿಯಿಂದ ಹೊರಗುತ್ತಿಗೆ). | - | 420/- |
| 5 | ಶ್ರೀ. ಡಿ. ನಾಗೇಶ್<br>ಬಿನ್ ದೊಡ್ಡಯ್ಯ,<br>ಕಂಪ್ಯೂಟರ್ ಆಪರೇಟರ್,<br>(ಹೆಚ್.ಸಿ.ಎಲ್. ಕಂಪನಿ ವತಿಯಿಂದ ಹೊರಗುತ್ತಿಗೆ). | - | 2,100-00<br>+16,945-00 |
| 6 | ಶ್ರೀ. ಪಿ. ಸಂದೀಪ್<br>ಬಿನ್ ಪ್ರಸನ್ನಕುಮಾರ್,<br>ಏಜೆಂಟ್,<br>ಉಪನೋಂದಣಾಧಿಕಾರಿಯವರ ಕಛೇರಿ,<br>ಗುಂಡ್ಲುಪೇಟೆ. | - | 17,490/- |
| 7 | ಶ್ರೀ. ಪಿ. ಮಹಾದೇವಸ್ವಾಮಿ<br>ಬಿನ್ ಪುಟ್ಟಸ್ವಾಮಿ,<br>ಪತ್ರ ಬರಹಗಾರರು,<br>ಉಪನೋಂದಣಾಧಿಕಾರಿಯವರ ಕಛೇರಿ, | - | 14,190/- |

| | | | |
|---|---|---|---|
| | ಗುಂಡ್ಲುಪೇಟೆ. | | |
| 8 | ಶ್ರೀ. ಮಹೇಶ್<br>ಬಿನ್ ಲೇಟ್ ರಾಚನಾಯ್ಕ,<br>ಪತ್ರ ಬರಹಗಾರರು,<br>ಉಪನೋಂದಣಾಧಿಕಾರಿಯವರ ಕಛೇರಿ,<br>ಗುಂಡ್ಲುಪೇಟೆ. | - | 3,070/- |
| | | ಒಟ್ಟು | 54,505/- |

iii) ತನಿಖಾಧಿಕಾರಿಯವರು ಸದರಿ ದಿನ ಕಛೇರಿಯಲ್ಲಿ ವಸೂಲಾಗಿರುವ ಸರ್ಕಾರಿ ಶುಲ್ಕವನ್ನು ಹೊರತುಪಡಿಸಿ, ಮೇಲ್ಕಂಡ ಕ್ರಮ ಸಂಖ್ಯೆ-1 ರಿಂದ 4ರವರ ಬಳಿ ದೊರೆತ ಹಣವನ್ನು ಹಿಂದಿರುಗಿಸಿರುತ್ತಾರೆ. ಕ್ರಮ ಸಂಖ್ಯೆ-5ರವರ ಪ್ಯಾಂಟಿನ ಜೇಬಿನಲ್ಲಿ ದೊರೆತ ಹಣ 2,100/- ರೂ. (500/- ರೂ.ಗಳ 1 ನೋಟು, 200/- ರೂ.ಗಳ 4 ನೋಟುಗಳು, 100/- ರೂ.ಗಳ 7 ನೋಟುಗಳು, 50/- ರೂ.ಗಳ 1 ನೋಟು, 10/- ರೂ.ಗಳ 3 ನೋಟುಗಳು, 5/- ರೂ.ಗಳ 4 ನೋಟುಗಳು) ಹಾಗೂ ಅವರು ಕುಳಿತು ಕರ್ತವ್ಯನಿರ್ವಹಿಸುವ ಟೇಬಲ್ ಡ್ರಾನಲ್ಲಿದ್ದ ಬ್ಯಾಗನ್ನು ಪರಿಶೀಲಿಸಲಾಗಿ ಒಟ್ಟು 16,945/- ರೂ.ಗಳು (500/- ರೂ.ಗಳ 11 ನೋಟುಗಳು, 200/- ರೂ.ಗಳ 24 ನೋಟುಗಳು, 100/- ರೂ.ಗಳ 37 ನೋಟುಗಳು, 50/- ರೂ.ಗಳ 54 ನೋಟುಗಳು, 10/- ರೂ.ಗಳ 24 ನೋಟುಗಳು, 5/- ರೂ.ಗಳ 1 ನೋಟು). ಕ್ರಮ ಸಂಖ್ಯೆ-6ರವರ ಪ್ಯಾಂಟಿನ ಜೇಬಿನಲ್ಲಿ ದೊರೆತ ಹಣ 17,490/- ರೂ. (500/- ರೂ.ಗಳ 22 ನೋಟುಗಳು, 200/- ರೂ.ಗಳ 7 ನೋಟುಗಳು, 100/- ರೂ.ಗಳ 45 ನೋಟುಗಳು, 50/- ರೂ.ಗಳ 11 ನೋಟುಗಳು, 10/- ರೂ.ಗಳ 4 ನೋಟುಗಳು). ಕ್ರಮ ಸಂಖ್ಯೆ-7ರವರ ಪ್ಯಾಂಟಿನಲ್ಲಿ ದೊರೆತ ಒಟ್ಟು ಹಣ 14,190/- ರೂ. (500/- ರೂ.ಗಳ 23 ನೋಟುಗಳು, 200/- ರೂ.ಗಳ 2 ನೋಟುಗಳು, 100/- ರೂ.ಗಳ 17 ನೋಟುಗಳು, 50/- ರೂ.ಗಳ 11 ನೋಟು, 20/- ರೂ.ಗಳ 2 ನೋಟುಗಳು). ಕ್ರಮ ಸಂಖ್ಯೆ-8ರವರ ಪ್ಯಾಂಟಿನಲ್ಲಿ ದೊರೆತ ಹಣ 3,070/- ರೂ. (500/- ರೂ.ಗಳ 4 ನೋಟುಗಳು, 200/- ರೂ.ಗಳ 2 ನೋಟುಗಳು, 100/- ರೂ.ಗಳ 6 ನೋಟುಗಳು, 50/- ರೂ.ಗಳ 1 ನೋಟು, 20/- ರೂ.ಗಳ 1 ನೋಟು). ಒಟ್ಟು ರೂ. 53,795/- ರೂ.ಗಳಿದ್ದು, ತನಿಖಾಧಿಕಾರಿಯವರು ಸದರಿ ಹಣವು ಸಾರ್ವಜನಿಕರಿಂದ ಲಂಚದ ರೂಪದಲ್ಲಿ ಸಂಗ್ರಹಿಸಿದ ಹಣವಾಗಿದೆಯೇ ಎಂಬ ಬಗ್ಗೆ ಪರಿಶೀಲಿಸುವ ಕುರಿತು ವಶಕ್ಕೆ

ಪಡೆದಿರುತ್ತಾರೆ. ತನಿಖಾಧಿಕಾರಿಯವರು ಪಂಚರ ಸಮಕ್ಷಮ ಪರಿಶೀಲಿಸಲಾಗಿ ದಿ: 27/05/2018 ರಂದು ಕಛೇರಿಯಲ್ಲಿ ಒಟ್ಟು 71 ದಸ್ತಾವೇಜುಗಳು ನೋಂದಣಿಯಾಗಿದ್ದು, ಆ ದಸ್ತಾವೇಜುಗಳ ಬಗ್ಗೆ 21,890/- ರೂ.ಗಳು ಸಂಗ್ರಹವಾಗಬೇಕಾಗಿದ್ದು, 14,890/- ರೂ.ಗಳು ಮಾತ್ರ ಸಂಗ್ರಹವಾಗಿರುತ್ತದೆ. ಉಳಿದ ಹಣ ರೂ. 7,000/- ಸ್ಕ್ಯಾನಿಂಗ್ ಶುಲ್ಕವನ್ನು ಸಂಗ್ರಹ ಮಾಡಬೇಕಾಗಿರುತ್ತದೆ ಎಂದು 1ನೇ ಎದುರುದಾರರು ತಿಳಿಸಿರುತ್ತಾರೆ.

iv) ತನಿಖಾಧಿಕಾರಿಯವರು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿರುವ ಅಭಿಲೇಖಾಲಯದ ಕೊಠಡಿಯನ್ನು ಪ್ರವೇಶಿಸಿದಾಗ ಅಲ್ಲಿ ಗೋದ್ರೇಜ್ ಅಲ್ಮೇರಾದಲ್ಲಿ ಕ್ಯಾಷ್‌ಬಾಕ್ಸ್ ಇರುವುದಾಗಿ ಮತ್ತು ಅದರ ಕೀ 'ಡಿ' ಗ್ರೂಪ್ ನೌಕರ ಶಿವಮೂರ್ತಿಯವರ ಬಳಿ ಇರುವುದಾಗಿ 1ನೇ ಎದುರುದಾರರು ತಿಳಿಸಿರುತ್ತಾರೆ ಮತ್ತು ಆತ ರಜೆಯ ಮೇಲೆ ಹೋಗಿರುವುದಾಗಿ ತಿಳಿಸಿದ್ದರಿಂದ, ತನಿಖಾಧಿಕಾರಿಯವರು ಕ್ಯಾಷ್‌ಬಾಕ್ಸನ್ನು ಪರಿಶೀಲಿಸುವ ಸಲುವಾಗಿ ಬೀಗ ತೆಗೆಯುವ ಶ್ರೀ. ಜೆ.ಎಸ್. ಸೋಮಶೇಖರ್ ಬಿನ್ ಶ್ರೀಕಂಠಚಾರ್‌ರವರನ್ನು ಸಿಬ್ಬಂದಿ ಮುಖಾಂತರ ಕರೆಯಿಸಿ, ಪಂಚರ ಸಮಕ್ಷಮ ಬೀಗ ತೆಗೆಸಿ ಪರಿಶೀಲಿಸಲಾಗಿ ಅದು ಕಬ್ಬಿಣದ ಕ್ಯಾಷ್‌ಬಾಕ್ಸ್ ಆಗಿದ್ದು, ಲಾಕ್ ಆಗದೇ ಇದ್ದು, ಅದರಲ್ಲಿ ಮುಂಗಡಹಣ 100/- ರೂ. ಇರುವ ಬಗ್ಗೆ ತನಿಖಾಧಿಕಾರಿಯವರು ದೃಢಪಡಿಸಿಕೊಂಡಿರುತ್ತಾರೆ.

v) ಕ್ರಮ ಸಂಖ್ಯೆ-5ರಲ್ಲಿ ಕಂಡುಬಂದ ಶ್ರೀ. ನಾಗೇಶ್ ಡಿ. ರವರ ಬಳಿ ದೊರೆತ ಹಣ 19,045/- ರೂ.ಗಳಿದ್ದು, ಅವರ ಸಮಜಾಯಿಷಿಯಲ್ಲಿ ಆ ಹಣವನ್ನು ಪುರುಷರ ಸ್ವಸಹಾಯ ಸಂಘದಿಂದ ಪಡೆದುಕೊಂಡಿರುವುದಾಗಿ ಮತ್ತು ಆ ಹಣವನ್ನು ಹೆಂಡತಿಯು ಗರ್ಭಿಣಿಯಾಗಿದ್ದು, ಅವಳ ಆರೋಗ್ಯ ತಪಾಸಣೆಗಾಗಿ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ.

vi) ಕ್ರಮ ಸಂಖ್ಯೆ-6ರಲ್ಲಿ ಕಂಡುಬಂದ ಶ್ರೀ. ಸಂದೀಪ್, ಏಜೆಂಟ್‌ರವರು ಅವರ ಬಳಿ 17,490/- ರೂ.ಗಳಿದ್ದು, ಅವರ ಸಮಜಾಯಿಷಿಯಲ್ಲಿ ಆ ಹಣವನ್ನು ಅವರ ತಂದೆಯವರು ಅವರ ತಂಗಿಗೆ ಒಡವೆ ಮಾಡಿಸಲು ನೀಡಿರುವುದಾಗಿ ತಿಳಿಸಿರುತ್ತಾರೆ.

ಸಂ.ಕಂಪ್ಲೇಂಟ್/ಉಪಲೋಕ್/ ಎಂವೈಎಸ್/5117/2022
ಪಿ.ಓ. ಎ.ಆರ್.ಇ-06

vii) ಕ್ರಮ ಸಂಖ್ಯೆ-7ರಲ್ಲಿ ಕಂಡುಬಂದ ಶ್ರೀ. ಮಹಾದೇವಸ್ವಾಮಿ, ಪತ್ರ ಬರಹಗಾರರ ಬಳಿ 14,890/- ರೂ.ಗಳು ದೊರೆತಿದ್ದು, ಅವರ ಸಮಜಾಯಿಷಿಯಲ್ಲಿ ಈ ದಿನ ಗ್ರೂಪ್ 'ಡಿ' ನೌಕರರು ಬಾರದೇ ಇರುವ ಕಾರಣ, ದಾಖಲೆಗಳ ನೋಂದಣಿ, ಸ್ಕ್ಯಾನಿಂಗ್ ಮತ್ತು ಮ್ಯುಟೇಶನ್‌ಗಳಿಗೆ ಸಂಬಂಧಿಸಿದಂತೆ ಒಟ್ಟು ಹಣ 21,890/- ರೂ.ಗಳು ಬರಬೇಕಾಗಿದ್ದು, ಅದರಲ್ಲಿ 14,890/- ರೂ. ಪಡೆದುಕೊಂಡಿದ್ದು, ಇನ್ನು ಉಳಿದ 7,000/- ರೂ.ಗಳು ಬರಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ.

viii) ಕ್ರಮ ಸಂಖ್ಯೆ-8ರಲ್ಲಿ ಕಂಡುಬಂದ ಶ್ರೀ. ಮಹೇಶ್, ಪತ್ರ ಬರಹಗಾರರ ಬಳಿ 3,070/- ರೂ.ಗಳು ದೊರೆತಿದ್ದು, ಅವರ ಸಮಜಾಯಿಷಿಯಲ್ಲಿ ದಿ: 22/05/2019 ರಂದು ಗುಂಡ್ಲುಪೇಟೆಯ ಸುನೀತಾ ಬ್ಯಾಂಕರ್ಸ್ ಜ್ಯುವೆಲರ್ಸ್ ಶಾಪ್‌ನಲ್ಲಿ 6,000/- ರೂ.ಗಳಿಗೆ ಚಿನ್ನವನ್ನು ಗಿರವಿ ಇಟ್ಟಿದ್ದು, ಸ್ವಲ್ಪ ಹಣ ನನ್ನ ಮನೆ ವ್ಯವಹಾರಕ್ಕಾಗಿ ಖರ್ಚು ಮಾಡಿದ್ದು, ಉಳಿಕೆ ಹಣ ನನ್ನ ಬಳಿ ಇರುವುದಾಗಿ ತಿಳಿಸಿರುತ್ತಾರೆ.

ix) ಮೇಲ್ಕಂಡ ಕ್ರಮ ಸಂಖ್ಯೆ-4 ರಿಂದ 8ರವರೆಗಿನ ಅಧಿಕಾರಿ / ಸಿಬ್ಬಂದಿಯವರ ಸಮಜಾಯಿಷಿಗಳು ಸಮಂಜಸವಾಗಿಲ್ಲವಾದ್ದರಿಂದ, ಪಂಚರ ಸಮಕ್ಷಮ ತನಿಖಾಧಿಕಾರಿಯವರು ಸದರಿ ಹಣವನ್ನು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರು 1ನೇ ಎದುರುದಾರರಿಗೆ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಲು ತಿಳಿಸಿದಾಗ, 1ನೇ ಎದುರುದಾರರು ಕಛೇರಿಯ ಹಾಜರಿ ಪುಸ್ತಕ, ನಗದು ಘೋಷಣಾ ವಹಿ ಮತ್ತು ದಿ: 27/05/2019 ರಂದು ಉಪನೋಂದಣಿ ಕಛೇರಿಯಲ್ಲಿ ವಸೂಲಾದ ಶುಲ್ಕಗಳು ಹಾಗೂ ಬರಬೇಕಾದ ಸ್ಕ್ಯಾನಿಂಗ್ ಫೀಸ್‌ಗಳ ವಿವರ ಇರುವ ಕಂಪ್ಯೂಟರ್ ಜನರೇಟೆಡ್ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಆ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ಪಡೆದು ದೃಢೀಕರಿಸಿಕೊಂಡ ನಂತರ, ತನಿಖಾಧಿಕಾರಿಯವರು ದಾಖಲಾತಿಗಳನ್ನು ವಶಕ್ಕೆ ಪಡೆದಿರುತ್ತಾರೆ ಮತ್ತು ಈ ಬಗ್ಗೆ ವಿವರವಾದ ಪಂಚನಾಮೆಯನ್ನು ತನಿಖಾಧಿಕಾರಿಯವರು ನಿರ್ವಹಿಸಿರುತ್ತಾರೆ.

x) ತನಿಖಾಧಿಕಾರಿಯವರು ತನಿಖೆಯ ಸಮಯದಲ್ಲಿ ಸಿದ್ದಾರ್ಥ ಪುರುಷರ ಸ್ವಸಹಾಯ ಸಂಘ, ದೊಡ್ಡರಾಯಪೇಟೆ, ಚಾಮರಾಜನಗರದವರಿಗೆ ದಿ: 01/07/2019 ರಂದು ಪತ್ರ ಬರೆದು ಕೆಲವು ಮಾಹಿತಿಗಳನ್ನು ಕೋರಿರುತ್ತಾರೆ. ದಿ: 07/08/2019 ರಂದು ಸ್ವಸಹಾಯ ಸಂಘದವರು ತನಿಖಾಧಿಕಾರಿಯವರಿಗೆ ಮಾಹಿತಿ ಸಲ್ಲಿಸಿದ್ದು, ಸದರಿ

ಮಾಹಿತಿಯಲ್ಲಿ 2ನೇ ಎದುರುದಾರರಿಗೆ 27/05/2019 ರಂದು ಸಂಘದಿಂದ ಸಾಲ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸಂಘದವರು ಹಾಜರುಪಡಿಸಿದ ದಾಖಲಾತಿಗಳಲ್ಲಿ 2ನೇ ಎದುರುದಾರರಿಗೆ ಸಾಲ ನೀಡಿದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**xi)** ತನಿಖಾಧಿಕಾರಿಯವರು ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳನ್ನು ಸಂಗ್ರಹಿಸಿ ಎದುರುದಾರರುಗಳ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

**xii)** ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆಗಳು ಮತ್ತು ಇತರೆ ಅಂಶಗಳು ಎದುರುದಾರರುಗಳ ದುರ್ನಡತೆಯನ್ನು ತೋರಿಸುತ್ತದೆ.

3. ಎದುರುದಾರರುಗಳಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿದ್ದು, 1ನೇ ಎದುರುದಾರರು ದಿ: 10/02/2023 ರಂದು ಪರಿವೀಕ್ಷಣಾ ಟಿಪ್ಪಣಿಗೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. 1ನೇ ಎದುರುದಾರರು ಅವರ ಆಕ್ಷೇಪಣೆಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ಅವರ ಆಕ್ಷೇಪಣೆಯಲ್ಲಿ ಅವರು ಕರ್ತವ್ಯ ನಿರ್ವಹಿಸಿದ ಬಗ್ಗೆ ತಿಳಿಸಿರುತ್ತಾರೆ ಹಾಗೂ ಕಛೇರಿಯ ಮುಖ್ಯಸ್ಥನಾಗಿ ಮೇಲ್ವಿಚಾರಣೆಯನ್ನು ಹೊಂದಿದ್ದು, ತಪಾಸಣಾ ಸಮಯದಲ್ಲಿ ಕಛೇರಿಯ 'ಡಿ' ಗ್ರೂಪ್ ನೌಕರರು ದಿಢೀರ್ ಅನಾರೋಗ್ಯ ನಿಮಿತ್ತ ಗೈರು ಹಾಜರಾಗಿರುತ್ತಾರೆ ಮತ್ತು ದ್ವಿದ. ಸಹಾಯಕರು ಮಾಹಿತಿ ನೀಡದೆ, ಗೈರು ಹಾಜರಾಗಿರುತ್ತಾರೆಂದು ತಿಳಿಸಿರುತ್ತಾರೆ. ಮುಂದುವರೆದು, ತಪಾಸಣೆ ಸಮಯದಲ್ಲಿ ಶ್ರೀ. ನಾಗೇಶ್, ಶ್ರೀ. ಸಹದೇವ್, ಶ್ರೀಮತಿ ವಾಣಿ ಎಂಬುವವರು ಗಣಕಯಂತ್ರ ನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಮೇಲ್ಕಂಡ ನೌಕರರುಗಳಿಗೆ ಅವರ ಕಂಪನಿಗಳಿಂದ ನೇಮಕಾತಿ ಆದೇಶ ಪತ್ರ ನೀಡಿದ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸದರಿ ನೌಕರರಿಗೆ ಪ್ರತ್ಯೇಕವಾದ ಹಾಜರಾತಿ ವಹಿ, ನಗದು ಘೋಷಣಾ ವಹಿ, ವೇತನ ಬಟವಾಡೆಯ ಮಾಹಿತಿ, ಇನ್ನಿತರೆ ವೈಯುಕ್ತಿಕ ಮಾಹಿತಿಯ ಕಡತಗಳನ್ನು ಅವರ ಕಛೇರಿಯಲ್ಲಿ ನಿರ್ವಹಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಮೇಲ್ಕಂಡ ನೌಕರರಿಗೆ ಯಾವುದೇ ವೇತನ ಬಟವಾಡೆ ಮಾಡುವ ಅಧಿಕಾರವನ್ನು ಹೊಂದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ, ಗಣಕಯಂತ್ರ ನಿರ್ವಾಹಕರ ಬಳಿ ತಪಾಸಣೆ ಸಮಯದಲ್ಲಿ ದೊರೆತಿರುವ ಮೊತ್ತಕ್ಕೂ ತನಗೂ ಸಂಬಂಧವಿಲ್ಲವೆಂದು ತಿಳಿಸಿರುತ್ತಾರೆ. ಆ ಕಾರಣ, ಇಲಾಖಾ ವಿಚಾರಣಾ ಪ್ರಕ್ರಿಯೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ಸಂ.ಕಂಪ್ಲೇಂಟ್/ಉಪಲೋಕ್/ ಎಂವೈಎಸ್/5117/2022
ಪಿ.ಓ. ಎ.ಆರ್.ಇ-06

4. 2ನೇ ಎದುರುದಾರರು ದಿ: 06/02/2023 ರಂದು ಅವರ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಅವರ ಆಕ್ಷೇಪಣೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಂಪ್ಯೂಟರ್ ಆಪರೇಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ಭ್ರಷ್ಟಾಚಾರ ನಿಗ್ರಹದಳ ತನಿಖಾಧಿಕಾರಿಯವರು ಶೋಧನೆ ಮಾಡಿದಾಗ, 19,045/- ರೂ.ಗಳು ದೊರೆತಿದ್ದು, ಸದರಿ ಹಣವನ್ನು ತನ್ನ ಹೆಂಡತಿಯ ಆರೋಗ್ಯ ತಪಾಸಣೆಗಾಗಿ ಇಟ್ಟುಕೊಂಡಿರುವುದಾಗಿ ಹಾಗೂ ಸದರಿ ಹಣವನ್ನು ಸಿದ್ಧಾರ್ಥ ಪುರುಷರ ಸ್ವ ಸಹಾಯ ಸಂಘದಲ್ಲಿ ದಿ: 10-05-2019 ರಂದು 20,000/- ರೂ.ಗಳನ್ನು ಸಾಲವಾಗಿ ಪಡೆದಿದ್ದು, ಅದನ್ನು ಮನೆಯಲ್ಲಿ ಸಂರಕ್ಷಿಸಿದ್ದು, ದಿ: 25/05/2019 ರಂದು ಅವರ ಪತ್ನಿಯ ತಪಾಸಣೆ ಇದ್ದು, ಆ ದಿನ ಶನಿವಾರವಾಗಿದ್ದರಿಂದ, ಕೆಲಸ ಮುಗಿಸಿ ಮನೆಗೆ ರಾತ್ರಿ ತಡವಾಗಿ ತಲುಪಿದ್ದು, ಭಾನುವಾರ ರಜಾವಾಗಿದ್ದರಿಂದ, ಸೋಮವಾರ ಕರ್ತವ್ಯಕ್ಕೆ ಹಾಜರಾಗಿ ಉಪನೋಂದಣಾಧಿಕಾರಿಯವರ ಅನುಮತಿ ಕೇಳಿ, ಅವರ ಪತ್ನಿಯ ಆರೋಗ್ಯ ತಪಾಸಣೆ ಮಾಡಿಸಬೇಕೆಂದು ಹಣ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ ಮತ್ತು ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. 2ನೇ ಎದುರುದಾರರು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ಅವರು ದಿ: 10/05/2019 ರಂದು ಸಾಲ ಪಡೆದಿದ್ದರೂ ಸಹ ಅವರು ದಿ: 25/05/2019 ರಂದು ವೈದ್ಯರನ್ನು ಭೇಟಿಯಾಗಿರುವುದು ಅವರು ಸಲ್ಲಿಸಿದ ದಾಖಲೆಯಿಂದ ಸ್ಪಷ್ಟವಾಗಿರುತ್ತದೆ. ಆದರೆ, ಆತ ತನ್ನ ಆಕ್ಷೇಪಣೆಯಲ್ಲಿ ದಿ: 25/05/2019 ರಂದು ವೈದ್ಯರನ್ನು ಭೇಟಿಯಾಗಿಲ್ಲವೆಂದು ತಿಳಿಸಿರುವುದು ಸಮಂಜಸವಾಗಿರುವುದಿಲ್ಲ. 1 ಮತ್ತು 2ನೇ ಎದುರುದಾರರು ನೀಡಿದ ಸಮಜಾಯಿಷಿಯ ಅಂಶಗಳು ಸಮರ್ಪಕವಾಗಿರುವುದಿಲ್ಲ. ಈ ಎಲ್ಲಾ ಕಾರಣಗಳು ಮತ್ತು ದೋಷಾರೋಪಣ ಪತ್ರದ ದಾಖಲೆಗಳ ಅಂಶಗಳು ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

5. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ 1 ಮತ್ತು 2ನೇ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರುಗಳ ವಿರುದ್ಧ ನಡವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

6. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರುಗಳು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ.

ಸಂ.ಕಂಪ್ಲೇಂಟ್/ಉಪಲೋಕ್/ ಎಂವೈಎಸ್/5117/2022
ಪಿ.ಓ. ಎ.ಆರ್.ಇ-06

(ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. 1ನೇ ಎದುರುದಾರರಾದ **ಶ್ರೀ. ಟಿ.ಎಸ್. ರವಿ ಬಿನ್ ಶೇಖರಪ್ಪ** ಟಿ., ಉಪನೋಂದಣಾಧಿಕಾರಿಗಳ ಕಛೇರಿ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆರವರ ನಿವೃತ್ತಿ ದಿ: 31/07/2029 ಆಗಿರುತ್ತದೆ. 2ನೇ ಎದುರುದಾರರು ಹೊರಗುತ್ತಿಗೆ ನೌಕರರಾಗಿದ್ದು, (ಹುಟ್ಟಿದ ದಿನಾಂಕ: 13/06/1984 ಆಗಿರುತ್ತದೆ.) ಈಗಲೂ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಎದುರುದಾರರುಗಳ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16/6/23

**(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)**
ಉಪಲೋಕಾಯುಕ್ತರು-02,
ಕರ್ನಾಟಕ ರಾಜ್ಯ, ಬೆಂಗಳೂರು.